**2017ರ ಕರ್ನಾಟಕ ಅಧಿನಿಯಮ ಸಂಖ್ಯೆ 44**
**ಕರ್ನಾಟಕ ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ಅಧಿನಿಯಮ, 2017**
**ಪ್ರಕರಣಗಳ ಪಟ್ಟಿ**

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

.

**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಸಾರ್ವಜನಿಕ ಸುರಕ್ಷೆಯ ಕ್ರಮಗಳನ್ನು ಒದಗಿಸಲು ಹೊಣೆಗಾರಿಕೆ
4. ನಿಯತಕಾಲಿಕ ವಿವರಪಟ್ಟಿಕೆಗಳನ್ನು ದಾಖಲು ಮಾಡುವ ಹೊಣೆಗಾರಿಕೆ
5. ಆವರಣಗಳನ್ನು ಪರಿಶೀಲಿಸಲು ಪೊಲೀಸ್ ನಿರೀಕ್ಷಕನ ಅಧಿಕಾರಗಳು
6. ಸಾರ್ವಜನಿಕ ಸುರಕ್ಷಾ ಕ್ರಮಗಳನ್ನು ಒದಗಿಸಲು ತಪ್ಪುವುದು
7. ಅಪೀಲುಗಳು
8. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
9. ಉಳಿಸುವಿಕೆಗಳು
10. ನಿಯಮಗಳ ರಚನಾಧಿಕಾರ.


**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**2017ರ ಅಧಿನಿಯಮ ಸಂಖ್ಯೆ 44.**–ಕರ್ನಾಟಕ ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ವಿಧೇಯಕ, 2017 ರ ಉದ್ದೇಶಗಳು ಈ ಮುಂದಿನಂತಿವೆ:

(i) ಕಳ್ಳತನವನ್ನು ಒಳಗೊಂಡು ಸಾರ್ವಜನಿಕ ಭದ್ರತೆ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಸಲುವಾಗಿ ಅಪರಾಧಗಳ ತಡೆ, ಪತ್ತೆ ಮತ್ತು ಕಂಡುಹಿಡಿಯುವ ಹಾಗೂ ವ್ಯಕ್ತಿಗಳ ದೃಶ್ಯದಾಖಲೆಯನ್ನು ನಿರ್ವಹಿಸುವ ಸಾರ್ವಜನಿಕ ನಿಗಾ ವ್ಯವಸ್ಥೆಯೊಳಗೆ ಪೊಲೀಸ್ ಇಲಾಖೆಯು ಪ್ರವೇಶ ಮಾಡಲು ಇರುವ ಅವಶ್ಯಕತೆಯನ್ನು ಸಾಧ್ಯಗೊಳಿಸುವುದು;

(ii) ಭಯೋತ್ಪಾದಕ ದಾಳಿಯನ್ನು ಒಳಗೊಂಡು ಭದ್ರತೆಯ ಆತಂಕಗಳ ವಿರುದ್ಧ ಸುರಕ್ಷತೆಯನ್ನು ನೀಡಲು ಪ್ರತಿಬಂಧಾತ್ಮಕ ಕಾನೂನು ವ್ಯವಸ್ಥೆಯನ್ನು ಸುಧಾರಣೆಗೊಳಿಸುವುದು;

(iii) ಅಪರಾಧ ಪ್ರಮಾಣಗಳನ್ನು, ಭಯೋತ್ಪಾದನೆ, ಕಾನೂನು ಬಾಹಿರ ಚಟುವಟಿಕೆಗಳನ್ನು ನಿರ್ಬಂಧಿಸುವುದು ಹಾಗೂ ಸಾರ್ವಜನಿಕರಿಗೆ ಸುರಕ್ಷಿತ ಮತ್ತು ಸುಭದ್ರ ವಾತಾವರಣವನ್ನು ಸುನಿಶ್ಚಿತಗೊಳಿಸುವ ಮೂಲಕ ವಿವಿಧ ಅಪರಾಧಗಳ ತನಿಖೆ, ಅಭಿಯೋಜನೆ ಹಾಗೂ ವಿಚಾರಣೆಗಳಿಗೆ ನೆರವು ನೀಡುವುದು;

ಆದುದರಿಂದ,–

ಆದುದರಿಂದ,

(i) ರಾಜ್ಯದಲ್ಲಿನ ವಾಣಿಜ್ಯ ಕಾರ್ಯಸಂಸ್ಥೆಗಳು, ಕೈಗಾರಿಕಾ ಕಾರ್ಯಸಂಸ್ಥೆಗಳು, ಧಾರ್ಮಿಕ ಸ್ಥಳಗಳು, ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳು, ರೈಲ್ವೆ ನಿಲ್ದಾಣಗಳು, ಬಸ್ ನಿಲ್ದಾಣಗಳು, ಸಂಘಟಿತ ಧಾರ್ಮಿಕ ಕೂಟಗಳು ಸೇರುವ ಸ್ಥಳಗಳಂತಹ ಕಾರ್ಯಸಂಸ್ಥೆಗಳಲ್ಲಿ ಹಾಗೂ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಕಾರ್ಯಸಂಸ್ಥೆಗಳಲ್ಲಿ ಸಾರ್ವಜನಿಕ ಸುರಕ್ಷೆಯ ಕ್ರಮಗಳಿಗೆ;

(ii) ಕಾರ್ಯಸಂಸ್ಥೆಗಳ ಮಾಲೀಕರು ತಮ್ಮ ಸ್ವಂತ ವೆಚ್ಚದಲ್ಲಿ ಸಿಸಿಟಿವಿಗಳಂಥ ಸಾರ್ವಜನಿಕ ನಿಗಾ ವ್ಯವಸ್ಥೆಗಳನ್ನ ಅಳವಡಿಸಿಕೊಳ್ಳಲು ಮತ್ತು ನಿರ್ದಿಷ್ಟ ಅಪರಾಧಗಳ ತನಿಖೆಯಲ್ಲಿ ಅಗತ್ಯವಿದ್ದಾಗಲೆಲ್ಲಾ ನಿಯೋಜಿತ ಪೊಲೀಸ್ ಅಧಿಕಾರಿಗಳಿಗೆ 30 ದಿನಗಳವರೆಗೆ ದೃಶ್ಯ ದಾಖಲೆಗಳು ಲಭ್ಯವಾಗುವಂತೆ ಮಾಡುವುದಕ್ಕೆ ಉಪಬಂಧ ಕಲ್ಪಿಸಲು;

(iii) ಅಧಿಸೂಚಿತ ಕಾರ್ಯಸಂಸ್ಥೆಯಲ್ಲಿನ ವಿಡಿಯೋ ಫೂಟೇಜ್‌ನ ಅಳವಡಿಕೆ ಮತ್ತು ಸೂಕ್ತ ನಿರ್ವಹಣೆಗಾಗಿ ಹೊಣೆಗಾರರನ್ನಾಗಿಸಲು;

(iv) ಸಾರ್ವಜನಿಕ ನಿಗಾ ವ್ಯವಸ್ಥೆಯ ಅಳವಡಿಕೆಯಲ್ಲಿ ವಿಫಲವಾಗುವ ಅಧಿಸೂಚಿತ ಕಾರ್ಯಸಂಸ್ಥೆಗಳಿದ್ದರೆ ಅವುಗಳಿಗೆ ದಂಡದ ಉಪಬಂಧಗಳಿಗೆ

ಹಾಗೂ ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ 36:, ಕಡತ ಸಂಖ್ಯೆ:ಸಂವ್ಯಶಾಇ 38 ಶಾಸನ 2017)
(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 1 ಮತ್ತು 2ನೇಯ ನಮೂದನೆಯಡಿಯಲ್ಲಿ ಬರುತ್ತದೆ.)

**2017ರ ಕರ್ನಾಟಕ ಅಧಿನಿಯಮ ಸಂಖ್ಯೆ 44**

(2017ರ ಡಿಸೆಂಬರ್ ತಿಂಗಳ 7ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ಅಧಿನಿಯಮ, 2017**

(2017ರ ಡಿಸೆಂಬರ್ ತಿಂಗಳ 6ನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

ರಾಜ್ಯದಲ್ಲಿನ ಕಾರ್ಯಸಂಸ್ಥೆಗಳಲ್ಲಿ ಸಾರ್ವಜನಿಕ ಸುರಕ್ಷೆಯ ಕ್ರಮಗಳನ್ನು ಉಪಬಂಧಿಸುವುದಕ್ಕಾಗಿ ಒಂದು ಅಧಿನಿಯಮ.

ರಾಜ್ಯದಲ್ಲಿನ ಕಾರ್ಯಸಂಸ್ಥೆಗಳಲ್ಲಿ ಸಾರ್ವಜನಿಕ ಸುರಕ್ಷೆಯ ಕ್ರಮಗಳಿಗೆ ಉಪಬಂಧಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರ ಅಡಿಯಲ್ಲಿ ರಚನೆಯಾದ ಇತರ ನಗರಪಾಲಿಕೆಗಳ ಸಮಗ್ರ ಪ್ರದೇಶಗಳು ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಗುರುತಿಸಿ ಮತ್ತು ಅಧಿಸೂಚಿಸಬಹುದಾದ ಅಂಥ ಇತರ ಪ್ರದೇಶಗಳು ಮತ್ತು ಸ್ಥಳಗಳಿಗೆ ವ್ಯಾಪ್ತವಾಗುತ್ತದೆ.

(3) ಇದು, ರಾಜ್ಯ ಸರ್ಕಾರವು, ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ಕಾರ್ಯಸಂಸ್ಥೆ"** ಒಂದೇ ಸಮಯದಲ್ಲಿ ನೂರು ಜನ ಅಥವಾ ಹೆಚ್ಚು ಜನರು ಸಾರ್ವಜನಿಕವಾಗಿ ಒಟ್ಟುಗೂಡುವ ಸಂಭಾವ್ಯತೆಯೊಂದಿಗೆ ಜನರು ಬಹುಸಂಖ್ಯೆಯಲ್ಲಿ ಮತ್ತೆ ಮತ್ತೆ ಬರುವ ಸ್ಥಳಗಳಾದ ವಾಣಿಜ್ಯ ಸಂಸ್ಥೆಗಳು, ಕೈಗಾರಿಕಾ ಸಂಸ್ಥೆಗಳು, ಧಾರ್ಮಿಕ ಸ್ಥಳಗಳು, ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳು, ರೈಲ್ವೆ ನಿಲ್ದಾಣಗಳು, ಬಸ್ ನಿಲ್ದಾಣಗಳು, ಸಂಘಟಿತ ಧಾರ್ಮಿಕ ಕೂಟಗಳು (congregations) ಸೇರುವ ಸ್ಥಳಗಳು, ಈ ಅಧಿನಿಯಮದ ಉದ್ದೇಶಕ್ಕಾಗಿ ಕಾರ್ಯ ಸಂಸ್ಥೆಯಾಗಿ ಸರ್ಕಾರವು ಅಧಿಸೂಚನೆಯ ಮೂಲಕ ಘೋಷಿಸಬಹುದಾದ ಅಂಥ ಇತರ ಕಾರ್ಯ ಸಂಸ್ಥೆಗಳು ಇಂಥ ಸ್ಥಳಗಳು;

(ಬಿ) **"ಸರ್ಕಾರ"** ಎಂದರೆ, ಕರ್ನಾಟಕ ರಾಜ್ಯ ಸರ್ಕಾರ;

(ಸಿ) **"ಪರವಾನಗಿ"** ಎಂದರೆ, ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 ಅಥವಾ ಬೆಂಗಳೂರು ಸಿನಿಮಾಗಳು (ನಿಯಂತ್ರಣ) ಅಧಿನಿಯಮ, 1964 ಅಥವಾ ಕರ್ನಾಟಕ ಶಿಕ್ಷಣ ಅಧಿನಿಯಮ, 1983 ಅಥವಾ ಈ ಉದ್ದೇಶಕ್ಕಾಗಿ ಸಂಬಂಧಪಟ್ಟ ಅಧಿನಿಯಮಗಳ ಅಡಿಯಲ್ಲಿ ರಚಿಸಲಾದ ಯಾವುದೇ ಇತರ ಅಧಿನಿಯಮ ಅಥವಾ ನಿಯಮಗಳ ಅಡಿಯಲ್ಲಿ ಕಾರ್ಯ ಸಂಸ್ಥೆಯೊಂದನ್ನು ಸ್ಥಾಪಿಸಲು ಅಥವಾ ನಡೆಸಲು, ಪಡೆಯಲಾದ ನ್ಯಾಯಸಮ್ಮತವಾದ ಅನುಮತಿ ಅಥವಾ ಪರವಾನಗಿ;

(ಡಿ) **"ಪರವಾನಗಿ (ಮಂಜೂರಾತಿ) ಪ್ರಾಧಿಕಾರ"** ಎಂದರೆ, ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 ಅಥವಾ ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964 ಅಥವಾ ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಅಡಿಯಲ್ಲಿ ಸಂಸ್ಥೆಯೊಂದನ್ನು ಸ್ಥಾಪಿಸಲು ಅಥವಾ ನಡೆಸಲು ಪರವಾನಗಿಯನ್ನು ನೀಡಲು ಸಕ್ಷಮವಾದ ಪ್ರಾಧಿಕಾರ ಅಥವಾ ಸಂಸ್ಥೆಯೊಂದನ್ನು ನಡೆಸುವುದಕ್ಕಾಗಿ ಅನುಮತಿ ಅಥವಾ ಪರವಾನಗಿಯನ್ನು ನೀಡುವ ಸಕ್ಷಮವಾದ ಪ್ರಾಧಿಕಾರ;

(ಇ) **"ಅಧಿಸೂಚನೆ"** ಎಂದರೆ, ಕರ್ನಾಟಕ ರಾಜ್ಯಪತ್ರದಲ್ಲಿ ಸರ್ಕಾರವು ಪ್ರಕಟಿಸಿದ ಅಧಿಸೂಚನೆ ಮತ್ತು ಅಧಿಸೂಚಿತ ಪದವನ್ನು ಅದಕ್ಕನುಸಾರವಾಗಿ ಅರ್ಥೈಸತಕ್ಕದ್ದು;

(ಎಫ್) **"ನಿಯಮಿಸಲಾದ"** ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ಸರ್ಕಾರದಿಂದ ನಿಯಮಿಸಲಾದುದು;

(ಜಿ) **"ಸಾರ್ವಜನಿಕ ಸುರಕ್ಷೆಯ ಕ್ರಮಗಳು"** ಎಂದರೆ, ಸರ್ಕಾರವು ನಿಯಮಿಸಬಹುದಾದ ಕಾರ್ಯ ಸಂಸ್ಥೆಗಳ ಮತ್ತು ಅವುಗಳ ವಾಹನ ನಿಲುಗಡೆ (parking) ಪ್ರದೇಶಗಳಲ್ಲಿ,–

(i) ಭೌತಿಕ ಮತ್ತು ತಾಂತ್ರಿಕ ಸಾಧನಗಳ ಮೂಲಕ ಗಮ್ಯನಿಯಂತ್ರಕಗಳು (Access Controls) ;

(ii) ಮೂವತ್ತು ದಿನಗಳಿಗಾಗಿ ವಿಡಿಯೋ ಫೂಟೇಜ್ (Video footage) ಸಂಗ್ರಹಣೆಯನ್ನು ಒದಗಿಸುವ ತೆರಪಿಲ್ಲದ ವಿದ್ಯುನ್ಮಂಡಲ ದೂರದರ್ಶಕ ನಿಗಾವಣೆ (Closed circuit television surveillance) ಮೂಲಕ ನಿಗಾವಣೆ;

(iii) ಸರ್ಕಾರವು ಅಧಿಸೂಚಿಸಿದ ನಿರ್ದಿಷ್ಟ ವಿವರಣೆಗಳನ್ನು ದೃಢವಾಗಿ ಪಾಲಿಸುವ ತಾಂತ್ರಿಕ ಸಲಕರಣೆ; ಮತ್ತು

(iv) ಸಾರ್ವಜನಿಕ ಸುರಕ್ಷತೆಯನ್ನು ಹೆಚ್ಚಿಸಲು ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸುವ ಇತರ ಯಾವುದೇ ತಾಂತ್ರಿಕ ಸಲಕರಣೆ,

– ಇವುಗಳನ್ನು ಅಳವಡಿಸುವ ಮೂಲಕ, ಪ್ರವೇಶ ಮತ್ತು ನಿರ್ಗಮನ ಸ್ಥಳಗಳಲ್ಲಿನ ಗಮ್ಯ ನಿಯಂತ್ರಕಗಳು ಮತ್ತು ತೆರಪಿಲ್ಲದ ವಿದ್ಯುನ್ಮಂಡಲ ದೂರದರ್ಶಕ ನಿಗಾವಣೆ.

**3. ಸಾರ್ವಜನಿಕ ಸುರಕ್ಷೆಯ ಕ್ರಮಗಳನ್ನು ಒದಗಿಸಲು ಹೊಣೆಗಾರಿಕೆ.– (1)** ಕಾರ್ಯ ಸಂಸ್ಥೆಯೊಂದನ್ನು ನಡೆಸುತ್ತಿರುವ ಪ್ರತಿಯೊಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು, ತಮ್ಮ ಸಂಸ್ಥೆಯನ್ನು ಸಂದರ್ಶಿಸುವ ಸಾರ್ವಜನಿಕರ ಸುರಕ್ಷೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸಾರ್ವಜನಿಕ ಸುರಕ್ಷೆಯ ಕ್ರಮಗಳನ್ನು ಒದಗಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಕಾರ್ಯ ಸಂಸ್ಥೆಯೊಂದನ್ನು ನಡೆಸುತ್ತಿರುವ ಪ್ರತಿಯೊಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು, ಮೂವತ್ತು ದಿನಗಳ ಅಥವಾ ಸರ್ಕಾರವು ಅಧಿಸೂಚಿಸಿದ ಅವಧಿಗಾಗಿ ವಿಡಿಯೋ ಫೂಟೇಜ್ (video footage) ಅನ್ನು ಕ್ರಮಬದ್ಧವಾಗಿ ಉಳಿಸತಕ್ಕದ್ದು ಅಥವಾ ಸಂಗ್ರಹಿಸತಕ್ಕದ್ದು ಮತ್ತು ಪ್ರದೇಶದ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ನಿರೀಕ್ಷಕನು ಅಥವಾ ಸರ್ಕಾರವು ಅಧಿಸೂಚಿಸಬಹುದಾದ ಯಾವೊಬ್ಬ ಇತರ ಪ್ರಾಧಿಕಾರಿಯು ಅಗತ್ಯಪಡಿಸಿದಾಗಲೆಲ್ಲಾ ಅದನ್ನು ಒದಗಿಸತಕ್ಕದ್ದು.

**4. ನಿಯತಕಾಲಿಕ ವಿವರಪಟ್ಟಿಕೆಗಳನ್ನು ದಾಖಲು ಮಾಡುವ ಹೊಣೆಗಾರಿಕೆ.–** (1) ಕಾರ್ಯ ಸಂಸ್ಥೆಯೊಂದನ್ನು ನಡೆಸುತ್ತಿರುವ ಪ್ರತಿಯೊಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು, ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸಂಬಂಧಪಟ್ಟ ಪೊಲೀಸ್ ನಿರೀಕ್ಷಕನಿಗೆ, ಪ್ರತಿ ಮೂರು ತಿಂಗಳಿಗೊಮ್ಮೆ, ಸಾರ್ವಜನಿಕ ಸುರಕ್ಷಾ ಕ್ರಮಗಳನ್ನು ಒದಗಿಸಲಾಗಿದೆ, ಕ್ರಮಬದ್ಧವಾಗಿ ನಿರ್ವಹಿಸಲಾಗಿದೆ ಮತ್ತು ಸಂಬಂಧಪಟ್ಟ ಸಲಕರಣೆಗಳು ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಪ್ರಮಾಣೀಕರಿಸುವ ನಿಯತಕಾಲಿಕ ವಿವರಪಟ್ಟಿಕೆಗಳನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ನಮೂನೆಯಲ್ಲಿ ದಾಖಲು ಮಾಡತಕ್ಕದ್ದು. ನಿಯತಕಾಲಿಕ ವಿವರಪಟ್ಟಿಕೆಗಳನ್ನು ದಾಖಲು ಮಾಡಲು ವಿಫಲರಾಗುವ ಅಂಥವರು ಮೊದಲ ಸಲಕ್ಕೆ ಎರಡು ಸಾವಿರ ರೂಪಾಯಿಗಳ ಮತ್ತು ತದನಂತರದ ಪ್ರಸಂಗಗಳಿಗೆ ನಾಲ್ಕು ಸಾವಿರ ರೂಪಾಯಿಗಳ ಜುಲ್ಮಾನೆಯನ್ನು ಪಾವತಿಸಲು ಹೊಣೆಗಾರರಾಗತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಕಾರ್ಯ ಸಂಸ್ಥೆಯೊಂದನ್ನು ನಡೆಸುತ್ತಿರುವ ಪ್ರತಿಯೊಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಅಥವಾ ಪರವಾನಗಿಯ ನವೀಕರಣದ ಮುಂದಿನ ದಿನಾಂಕಕ್ಕಿಂತ ಮೊದಲು, ಇವೆರಡರಲ್ಲಿ ಯಾವುದು ಮೊದಲೋ, ಅಂದಿನಿಂದ ಮೂರು ತಿಂಗಳುಗಳ ಅವಧಿಯೊಳಗೆ ಸಾರ್ವಜನಿಕ ಸುರಕ್ಷಾ ಕ್ರಮಗಳನ್ನು ಕಾರ್ಯರೂಪಕ್ಕೆ ತರತಕ್ಕದ್ದು.

**5. ಆವರಣಗಳನ್ನು ಪರಿಶೀಲಿಸಲು ಪೊಲೀಸ್ ನಿರೀಕ್ಷಕನ ಅಧಿಕಾರಗಳು.–** ನಿಯಮಗಳಲ್ಲಿ ನಿರ್ದಿಷ್ಟ ಪಡಿಸಲಾದಂತೆ, ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ನಿರೀಕ್ಷಕನು, ಯಾವುದೇ ಸಮಯದಲ್ಲಿ, ಪೂರ್ವ ಸೂಚನೆಯಿಲ್ಲದೇ, ಯಾವುದೇ ಸಂಸ್ಥೆಯನ್ನು ಪ್ರವೇಶಿಸಿ, ಸಾರ್ವಜನಿಕ ಸುರಕ್ಷಾ ಕ್ರಮಗಳ ಅಳವಡಿಸುವಿಕೆ ಮತ್ತು ಕಾರ್ಯನಿರ್ವಹಣೆಯ ಕುರಿತು ಪರಿಶೀಲಿಸಬಹುದು ಮತ್ತು ತಪಾಸಣೆ ಮಾಡಬಹುದು ಹಾಗೂ ಯಾವುದೇ ಕರ್ತವ್ಯಲೋಪ ಅಥವಾ ಉಲ್ಲಂಘನೆಯ ಸಂದರ್ಭದಲ್ಲಿ, ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತ (ಎಸಿಪಿ) ಅಥವಾ ಸಂದರ್ಭಾನುಸಾರವಾಗಿ ಸಂಬಂಧಪಟ್ಟ ಉಪ-ವಿಭಾಗೀಯ ಪೊಲೀಸ್ ಅಧಿಕಾರಿ (ಎಸ್‌ಡಿಪಿಒ) ಇವರಿಗೆ ವರದಿಯನ್ನು ಕಳುಹಿಸತಕ್ಕದ್ದು.

**6. ಸಾರ್ವಜನಿಕ ಸುರಕ್ಷಾ ಕ್ರಮಗಳನ್ನು ಒದಗಿಸಲು ತಪ್ಪುವುದು.–** (1) ಸಂಬಂಧಪಟ್ಟ ಪ್ರದೇಶದ ಸಹಾಯಕ ಪೊಲೀಸ್ ಆಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪ-ವಿಭಾಗೀಯ ಪೊಲೀಸ್ ಅಧಿಕಾರಿಯು (ಎಸ್‌ಡಿಪಿಒ), 5ನೇ ಪ್ರಕರಣದ ಅಡಿಯಲ್ಲಿ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ಸಂಬಂಧಪಟ್ಟ ಪೊಲೀಸ್ ನಿರೀಕ್ಷಕನಿಂದ ವರದಿಯನ್ನು ಸ್ವೀಕರಿಸಿದ ಮೇಲೆ, ಪಾಲನೆ ಮಾಡದಿರುವ ಸಂದರ್ಭದಲ್ಲಿ ಪಾಲನೆ ಮಾಡದಿರುವ ಸಂದರ್ಭದಲ್ಲಿ ಅಂಥ ಸಂಸ್ಥೆಯನ್ನು ನಡೆಸುತ್ತಿರುವ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ, ಅನುಪಾಲನೆಗಾಗಿ ಹದಿನೈದು ದಿನಗಳ ಸಮಯವನ್ನು ನೀಡಿ, ಕಾರಣ ಕೇಳುವ ನೋಟೀಸನ್ನು ನೀಡತಕ್ಕದ್ದು.

(2) ಅಂಥ ಯಾವುದೇ ಕಾರ್ಯಸಂಸ್ಥೆಯನ್ನು ನಡೆಸುತ್ತಿರುವ ಒಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು, (1)ನೇ ಉಪಪ್ರಕರಣದ ಅಡಿಯಲ್ಲಿ ನೀಡಲಾದ ಕಾರಣ ಕೇಳುವ ನೋಟೀಸನ್ನು ಸ್ವೀಕರಿಸಿದ ಮೇಲೆ, ನೋಟೀಸಿನ ನಿರ್ದೇಶನಗಳನ್ನು ಪಾಲಿಸಲು ತಪ್ಪಿದಲ್ಲಿ, ಸಂಬಂಧಪಟ್ಟ ಸಹಾಯಕ ಪೊಲೀಸ್ ಆಯುಕ್ತ (ಎಸಿಪಿ) ಅಥವಾ ಸಂದರ್ಭಾನುಸಾರವಾಗಿ, ಉಪ-ವಿಭಾಗೀಯ ಪೊಲೀಸ್ ಅಧಿಕಾರಿಯು (ಎಸ್‌ಡಿಪಿಒ), ಅಂಥ ಸಂಸ್ಥೆಯನ್ನು ನಡೆಸುತ್ತಿರುವ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ,–

(i) ಕರ್ತವ್ಯಲೋಪದ ಮೊದಲ ತಿಂಗಳಿಗಾಗಿ–ರೂ.5000/–ಗಳ

(ii) ಕರ್ತವ್ಯಲೋಪದ ಎರಡನೇ ತಿಂಗಳಿಗಾಗಿ–ರೂ.10000/–ಗಳ,

– ರಾಜಿ ಮಾಡಿಕೊಳ್ಳುವ ಶುಲ್ಕವನ್ನು (compounding fee) ವಿಧಿಸಬಹುದು.

(3) ಅಂಥ ಯಾವುದೇ ಕಾರ್ಯಸಂಸ್ಥೆಯನ್ನು ನಡೆಸುತ್ತಿರುವ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು ಒಂದು ತಿಂಗಳ ಅವಧಿಯೊಳಗಾಗಿ ನಿರ್ದೇಶನಗಳನ್ನು ಪಾಲಿಸುವಲ್ಲಿ ವಿಫಲರಾದ ಯಾವುದೇ ಸಂದರ್ಭದಲ್ಲಿ, ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದ ಮೇಲ್ವಿಚಾರಣಾ ಸಮಿತಿಯು, ಅಂಥ ಯಾವುದೇ ಸಂಸ್ಥೆಯನ್ನು ನಡೆಸುತ್ತಿರುವ ಮಾಲೀಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು ನೀಡಿದ ವಿವರಣೆಯನ್ನು ಪರಿಶೀಲಿಸತಕ್ಕದ್ದು ಮತ್ತು ವಿವರಣೆಯು ತೃಪ್ತಿಕರವಾಗದೇ ಇದ್ದಲ್ಲಿ, ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ನಿರೀಕ್ಷಕನು ಆವರಣವನ್ನು ತಾತ್ಕಾಲಿಕವಾಗಿ ಸೀಲು ಮಾಡಿ, ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತ (ಎಸಿಪಿ) ಅಥವಾ ಸಂದರ್ಭಾನುಸಾರವಾಗಿ ಉಪ-ವಿಭಾಗೀಯ ಪೊಲೀಸ್ ಅಧಿಕಾರಿಯ (ಎಸ್‌ಡಿಪಿಒ) ಮೂಲಕ ಸಂಬಂಧಪಟ್ಟ ಪರವಾನಗಿ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು:

ಪರಂತು, ದತ್ತಿ ಇಲಾಖೆಗಳ ಧಾರ್ಮಿಕ ಸಂಸ್ಥೆಗಳು ಅಥವಾ ಯಾವುದೇ ಇತರ ಧಾರ್ಮಿಕ ಸ್ಥಳ ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಸೀಲು ಮಾಡತಕ್ಕದ್ದಲ್ಲ.

(4) ಸಂಬಂಧಪಟ್ಟ, ಪರವಾನಗಿ ಪ್ರಾಧಿಕಾರವು, (3)ನೇ ಉಪಪ್ರಕರಣದ ಅಡಿಯಲ್ಲಿನ ಅಂಥ ವರದಿಯನ್ನು ಸ್ವೀಕರಿಸಿದ ಮೇಲೆ, ಅಂಥ ಸಂಸ್ಥೆಯನ್ನು ನಡೆಸುತ್ತಿರುವ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಕಾರಣ ಕೇಳುವ ನೋಟೀಸನ್ನು ನೀಡಿ ಪರವಾನಗಿಯನ್ನು ರದ್ದುಪಡಿಸತಕ್ಕದ್ದು.

**7. ಅಪೀಲುಗಳು.–** (1) ಈ ಅಧಿನಿಯಮದ ಅಡಿಯಲ್ಲಿ ಸಹಾಯಕ ಪೊಲೀಸ್ ಆಯುಕ್ತ ಅಥವಾ ಉಪ-ವಿಭಾಗೀಯ ಪೊಲೀಸ್ ಅಧಿಕಾರಿಯು ಮಾಡಿದ ಆದೇಶ ಅಥವಾ ಯಾವುದೇ ಕ್ರಮದಿಂದಾಗಿ ಬಾಧಿತನಾದ ಯಾವೊಬ್ಬ ವ್ಯಕ್ತಿ ಅಥವಾ ಕಾರ್ಯಸಂಸ್ಥೆಯು, ಆದೇಶದ ಅಥವಾ ಕ್ರಮದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ

ಅಧಿಕಾರವ್ಯಾಪ್ತಿಯುಳ್ಳ ಉಪ ಪೊಲೀಸ್ ಆಯುಕ್ತನಿಗೆ ಅಥವಾ ಸಂದರ್ಭಾನುಸಾರವಾಗಿ ಪೊಲೀಸ್ ಅಧೀಕ್ಷಕನಿಗೆ ಅಪೀಲನ್ನು ಸಲ್ಲಿಸಬಹುದು. ಉಪ ಪೊಲೀಸ್ ಆಯುಕ್ತನು ಅಥವಾ ಸಂದರ್ಭಾನುಸಾರವಾಗಿ ಪೊಲೀಸ್ ಅಧೀಕ್ಷಕನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಅಹವಾಲನ್ನು ಆಲಿಸಿ ಅಪೀಲನ್ನು ವಿಲೆ ಮಾಡತಕ್ಕದ್ದು.

(2) ಉಪ ಪೊಲೀಸ್ ಆಯುಕ್ತನ ಅಥವಾ ಪೋಲೀಸ್ ಅಧೀಕ್ಷಕನ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿ ಅಥವಾ ಕಾರ್ಯಸಂಸ್ಥೆಯು, ಅಂಥ ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಪೊಲೀಸ್ ಆಯುಕ್ತನಿಗೆ ಅಥವಾ ಸಂದರ್ಭಾನುಸಾರ ಪೋಲೀಸ್ ಮಹಾನಿರೀಕ್ಷಕನಿಗೆ ಎರಡನೇ ಅಪೀಲನ್ನು ಸಲ್ಲಿಸಬಹುದು, ಮತ್ತು ಎಲ್ಲಾ ಪ್ರಕರಣಗಳಲ್ಲಿ ಪೊಲೀಸ್ ಆಯುಕ್ತನ ಅಥವಾ ಪೋಲೀಸ್ ಮಹಾನಿರೀಕ್ಷನ ಆದೇಶವು ಅಂತಿಮವಾಗಿರತಕ್ಕದ್ದು. ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಅಂಥ ಅರ್ಜಿಗಳನ್ನು ಪೊಲೀಸ್ ಆಯುಕ್ತನು ಅಥವಾ ಪೋಲೀಸ್ ಮಹಾನಿರೀಕ್ಷಕನು ವಿಲೆ ಮಾಡತಕ್ಕದ್ದು.

**8. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರಡಿಯಲ್ಲಿ ಮಾಡಲಾದ ಯಾವುದೇ ನಿಯಮ ಅಥವಾ ಆದೇಶದ ಅಡಿಯಲ್ಲಿ, ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ, ಯಾವೊಬ್ಬ ಪ್ರಾಧಿಕಾರಿ ಅಥವಾ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**9. ಉಳಿಸುವಿಕೆಗಳು.–** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಹೆಚ್ಚುವರಿಯಾಗಿರತಕ್ಕದ್ದೇ ಹೊರತು ಅದಕ್ಕೆ ಬಾಧಕವನ್ನುಂಟುಮಾಡುವಂತಿರತಕ್ಕದಲ್ಲ. ಈ ಅಧಿನಿಯಮದಲ್ಲಿರುವುದಾವುದೂ, ಈ ಅಧಿನಿಯಮದ ಹೊರತಾಗಿ ಯಾವೊಬ್ಬ ವ್ಯಕ್ತಿಯ ವಿರುದ್ಧ ಪ್ರಾರಂಭಿಸಬೇಕಾಗಿರುವ ಅಥವಾ ಮಾಡಬೇಕಾಗಿರುವ ಯಾವುದೇ ವ್ಯವಹರಣೆಗಳಿಂದ (ತನಿಖೆಯ ಮೂಲಕವಾಗಿರಲಿ ಅಥವಾ ಅನ್ಯಥಾ ಆಗಿರಲಿ) ಆತನನ್ನು ವಿನಾಯಿತಿಗೊಳಿಸತಕ್ಕದ್ದಲ್ಲ.

**10. ನಿಯಮಗಳ ರಚನಾಧಿಕಾರ.-** (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಸರ್ಕಾರವು, ಅಧಿಸೂಚನೆಯ ಮೂಲಕ, ಪೂರ್ವ ಪ್ರಕಟಣೆಯ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಹದಿನಾಲ್ಕು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳೂ ಒಪ್ಪಿದರೆ ಆ ನಿಯಮದ ಆ ಮಾರ್ಪಾಟು ಅಥವಾ ರದ್ದತಿಯು ಅಧಿಸೂಚಿಸಿದ ದಿನಾಂಕದಿಂದ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ.ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: ೩೦೦